ಶ್ರೀ ಅಮರೇಗೌಡ ಬಯ್ಯಾಪುರ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರಿಗೆ ಅಧಿಕಾರಿಗಳು ತಪ್ಪು ಮಾಹಿತಿಗಳನ್ನು ಕೊಡುತ್ತಿದ್ದಾರೆ. ಸದನಕ್ಕೆ ತಪ್ಪು ಮಾಹಿತಿಗಳನ್ನು ಕೊಡಿಸುತ್ತಿದ್ದಾರೆ.

ಅಧ್ಯಕ್ಷರು : ನೀವು ಸವದತ್ತಿಗೆ ಸಂಬಂಧಪಟ್ಟಂತೆ ಕೇಳುವುದಾದರೆ ಕೇಳಿ.

ಶ್ರೀ ಅಮರೇಗೌಡ ಬಯ್ಯಾಪುರ : ಮಾನ್ಯ ಅಧ್ಯಕ್ಷರೆ, ನೀವೇ ನಮ್ಮ ನೆರವಿಗೆ ಬರದೇ ಹೋದರೆ ಹೇಗೆ?

ಅಧ್ಯಕ್ಷರು : ನಾನು ಇದಕ್ಕೆ allow ಮಾಡುವುದಿಲ್ಲ. ಇದು question hour, ನಿಮಗೆ ಬೇಕಾದಷ್ಟು ಅವಕಾಶಗಳು ಇವೆ. ತಾವು ಬೇಕಾದರೆ calling attention, demand ಮೇಲೆ ಮಾತನಾಡಿ. ನೀವು ಈ ರೀತಿ ವಾದ ಮಾಡುವಂಥಾದ್ದು ಸರಿಯಲ್ಲ. ನಾನು ಒಂದು ಸಲ ಹೇಳಿದ ಮೇಲೆ ಕುಳಿತುಕೊಳ್ಳಿ. ನೀವೆಲ್ಲಾ seniorಗಳು question hourನಲ್ಲಿ ಏನು ಕೇಳಬೇಕೆಂದು ನಿಮಗೆ ಗೊತ್ತಿದೆ. ಮಾನ್ಯ ಗೋಪಾಲ ಭಂಡಾರಿಯವರೆ ತಾವು ಪ್ರಶ್ನೆ ಕೇಳಿ.

ಅರಣ್ಯ ವಾಸಿಗಳಿಗೆ ಹಕ್ಕು ಪತ್ರವನ್ನು ಕೊಡುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 15 : (55)

ಸದಸ್ಯರ ಹೆಸರು : ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ)

ಉತ್ತರಿಸುವವರು : ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯ ಮಂತ್ರಿಗಳು)

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಅರಣ್ಯದಲ್ಲಿ ಅನೇಕ ವರ್ಷಗಳಿಂದ ವಾಸ್ತವ್ಯವಿದ್ದ ಮತ್ತು ಕೃಷಿ ಮಾಡಿದ ಜಮೀನನ್ನು ಫಲಾನುಭವಿಗಳಿಗೆ ವಿತರಿಸಲು ರಾಜ್ಯದ ಯಾವ ಯಾವ ತಾಲ್ಲೂಕುಗಳಲ್ಲಿ ಯಾರು ಯಾರಿಗೆ ಎಷ್ಟೆಷ್ಟು ವಿತರಿಸಲು ಬಾಕಿ ಇದೆ;	ಗ್ರಾಮ ಸಭೆ ಅರ್ಹ ಫಲಾನುಭವಿಗಳಿಗೆ ಮತ್ತು ಅವರು ಉಪಯೋಗಿಸುವ ಅರಣ್ಯ ಪ್ರದೇಶ ತಾಲ್ಲೂಕುವಾರು ಅರ್ಹ ಬುಡಕಟ್ಟು ಜನಾಂಗದ ಮತ್ತು ಸಾಂಪ್ರದಾಯಿಕ ಅರಣ್ಯ ನಿವಾಸಿಗಳು ಹೊಂದಿರುವ ಪ್ರದೇಶದ ವಿವರಗಳನ್ನು ಸಂಗ್ರಹಿಸುವ ಕಾರ್ಯ, ಗ್ರಾಮಸಭೆಗಳಿಂದ ನಡೆಯುತ್ತಿದ್ದು ಅವುಗಳಿಂದ ಅರ್ಹ ಫಲಾನುಭವಿಗಳ ಮಾಹಿತಿ ಬಂದ ನಂತರ ಅರ್ಹ ಫಲಾನುಭವಿಗಳಿಗೆ ಜಮೀನು ಉತ್ಪನ್ನಗಳ ಹಕ್ಕು ಪತ್ರಗಳನ್ನು ವಿತರಿಸಲು ಕ್ರಮ ತೆಗೆದುಕೊಳ್ಳಲಾಗುವುದು.
ಆ.	ಭಾರತ ಸರ್ಕಾರ ಲೋಕಸಭೆಯಲ್ಲಿ ಮಂಜೂರು ಮಾಡಿದ ಅರಣ್ಯ	ಬುಡಕಟ್ಟು ಮತ್ತು ಸಾಂಪ್ರದಾಯಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕು ಮಾನ್ಯತೆ) ಕಾಯ್ದೆ 2006 ಮತ್ತು

	ವಾಸಿಗಳ ರಕ್ಷಣೆ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ತಂದಿರುವ ಕಾಯಿದೆಯ ಅನುಷ್ಠಾನ ಯಾವ ಹಂತದಲ್ಲಿದೆ;	ನಿಯಮ 2008 ರಡಿಯಲ್ಲಿ ಅರಣ್ಯವಾಸಿಗಳಿಗೆ ಅವರು ಅನುಭವಿಸುತ್ತಿರುವ ಜಮೀನಿನ ಹಕ್ಕುಗಳನ್ನು ಮಾನ್ಯ ಮಾಡುವ ನಿಟ್ಟಿನಲ್ಲಿ ಉಪ ವಿಭಾಗ ಮಟ್ಟದ ಸಮಿತಿ, ಜಿಲ್ಲಾ ಮಟ್ಟದ ಸಮಿತಿ ಮತ್ತು ರಾಜ್ಯಮಟ್ಟದ ಉಸ್ತುವಾರಿ ಸಮಿತಿಗಳನ್ನು ದಿನಾಂಕ : 2-4-2008ರ ಸರ್ಕಾರದ ಆದೇಶ ಸಂಖ್ಯೆ :ಸಕ್ಇ 19 ವವಯೋ 2008 ರ ಪ್ರಕಾರ ರಚಿಸಲಾಗಿರುತ್ತದೆ. ಸದರಿ ಕಾಯಿದೆ ಮತ್ತು ನಿಯಮಗಳನ್ನು ಕನ್ನಡ ಭಾಷೆಗೆ ಭಾಷಾಂತರಿಸಿ ಎಲ್ಲಾ ಜಿಲ್ಲಾಧಿಕಾರಿಗಳು ಜಿಲ್ಲಾಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಕಳುಹಿಸಲಾಗಿದೆ. ಗ್ರಾಮಸಭೆಗಳನ್ನು ನಡೆಸುವ ಮತ್ತು ಅರಣ್ಯ ಹಕ್ಕುಗಳ ಸಮಿತಿಗಳ ರಚನೆ ಕಾರ್ಯ ಪ್ರಗತಿಯಲ್ಲಿದ್ದು, ಪ್ರಸ್ತುತ ಕೊಡಗು ಜಿಲ್ಲೆಯಲ್ಲಿ 98 ಗ್ರಾಮಸಭೆಗಳನ್ನು ನಡೆಸಿ 51 ಅರಣ್ಯ ಹಕ್ಕುಗಳ ಸಮಿತಿಗಳನ್ನು ರಚಿಸಲಾಗಿದೆ. ಭಾರತ ಸರ್ಕಾರವು ಎಲ್ಲಾ ಅರಣ್ಯವಾಸಿಗಳಿಗೆ ಅರಣ್ಯ ಹಕ್ಕುಗಳನ್ನು 2009 ಜನವರಿ ತಿಂಗಳ ಒಳಗೆ ನೀಡುವಂತೆ ಸೂಚಿಸಿರುತ್ತದೆ. ಅದರಂತೆ, ಗ್ರಾಮಸಭೆಗಳನ್ನು ನಡೆಸಿ ಅರಣ್ಯ ಹಕ್ಕುಗಳ ಸಮಿತಿಗಳನ್ನು ರಚಿಸಿಕೊಂಡು ಅರಣ್ಯವಾಸಿಗಳಿಂದ ನಿಗದಿತ ನಮೂನೆಯಲ್ಲಿ ಕ್ಲೇಮ್‌ಗಳನ್ನು ಪಡೆದು ಪರಿಶೀಲಿಸಿ ಸಂಬಂಧಪಟ್ಟ ಉಪ ವಿಭಾಗಮಟ್ಟದ ಸಮಿತಿಗೆ ಕಳುಹಿಸುವಂತೆ ಹಾಗೂ ಉಪ ವಿಭಾಗ ಮಟ್ಟದ ಸಮಿತಿಗಳು ಇಂತಹ ಅರ್ಜಿಗಳನ್ನು ಪರಿಶೀಲಿಸಿ ಜಿಲ್ಲಾಮಟ್ಟದ ಸಮಿತಿಗೆ ಶಿಫಾರಸ್ಸು ಮಾಡಿ ಕಳುಹಿಸುವ ನಿಟ್ಟಿನಲ್ಲಿ ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಲಾಗಿದೆ.

ೇ.	ಅರಣ್ಯ ಪ್ರದೇಶ ಮತ್ತು ಅದರ ಹತ್ತಿರದಲ್ಲಿ ಸ್ವಂತ ಜಮೀನು ಅನುಭವಿಸುತ್ತಿರುವ ಜನರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;	ಅರಣ್ಯ ಸುರಕ್ಷತಾ ಕಾಯ್ದೆ 1980 ರನ್ವಯ, ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿರುವ ಜನರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅವಕಾಶವಿರುವುದಿಲ್ಲ. ಅರಣ್ಯ ಪ್ರದೇಶದ ಹತ್ತಿರದಲ್ಲಿ ಇರುವ ಗ್ರಾಮಗಳಲ್ಲಿ ಅರಣ್ಯ ಇಲಾಖಾ ವತಿಯಿಂದ ನಿರ್ಮಿಸಿದ ಗ್ರಾಮ ಅರಣ್ಯ ಸಮಿತಿಗಳು ಗ್ರಾಮಗಳಲ್ಲಿ ಪ್ರವೇಶ ದ್ವಾರ ಚಟುವಟಿಕೆಗಳ ಮೂಲಕ ಗ್ರಾಮಗಳ ಅತ್ಯಾವಶ್ಯಕ ಬೇಡಿಕೆಗಳಾದ ಕೊಳವೆ ಬಾವಿ, ರಸ್ತೆ ರಿಪೇರಿ, ಸಮುದಾಯ ಭವನ, ದನಕರುಗಳಿಗೆ ನೀರಿನ ಅವಶ್ಯಕತೆಗಳಿಗೆ ಬೇಕಾದ ಕೆಲಸಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಅರಣ್ಯದ ಹತ್ತಿರದಲ್ಲಿ ಸ್ವಂತ ಜಮೀನು ಅನುಭವಿಸುತ್ತಿರುವ ಜನರಿಗೆ ಅದರ ಅವಶ್ಯಕತೆಗನು ಗುಣವಾಗಿ ಗಿರಿಜನ ಉಪಯೋಜನೆಯಡಿ ಆರ್ಥಿಕ ಉನ್ನತಿ ಕಾರ್ಯಕ್ರಮಗಳು ಹಾಗೂ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಮನೆಗಳ ನಿರ್ಮಾಣ, ರಸ್ತೆ ಮತ್ತು ಚರಂಡಿ ನಿರ್ಮಾಣ ಮುಂತಾದ ಕಾರ್ಯಕ್ರಮಗಳನ್ನು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಅನುಷ್ಠಾನ ಗೊಳಿಸಲಾಗುತ್ತಿದೆ.

ಶ್ರೀ ಹೆಚ್. ಗೋಪಾಲ ಭಂಡಾರಿ : ಮಾನ್ಯ ಅಧ್ಯಕ್ಷರೆ, ನಾನು ಅರಣ್ಯವಾಸಿಗಳ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದ್ದೇನೆ. ಪಶ್ಚಿಮ ಘಟ್ಟದ ಮಲೆನಾಡು ಪ್ರದೇಶದಲ್ಲಿ ಅರಣ್ಯವಾಸಿಗಳ ಸಮಸ್ಯೆ ಬಹಳ ಗಂಭೀರವಾದಂಥ ಸಮಸ್ಯೆಯಾಗಿದೆ. ಅನೇಕ ತಲೆಮಾರುಗಳಿಂದ ಅಲ್ಲೆ ವಾಸ್ತವ್ಯವಿರುವಂಥ ಬುಡಕಟ್ಟು ಜನಾಂಗ ಮತ್ತು ಅರಣ್ಯ ಪ್ರದೇಶದಲ್ಲಿರುವಂಥ ಜನರು ಅತಂತ್ರದ ವಾತಾವರಣದಲ್ಲಿದ್ದಾರೆ, ಭಯದ ವಾತಾವರಣದಲ್ಲಿರುವಂಥ ಸಂದರ್ಭದಲ್ಲಿ ಅವರನ್ನು ಒಕ್ಕಲೆಬ್ಬಿಸುವಂಥ ಪರಿಸ್ಥಿತಿ ಕೂಡ ಒಂದು ಭಯದ ವಾತಾವರಣ ಅವರಲ್ಲಿದೆ. ಇಂಥ ಸಂದರ್ಭದಲ್ಲಿ ಅವರು ವಾಸ್ತವ್ಯವಿರುವಂಥ ಜಮೀನಿಗೆ ಹಕ್ಕು ಪತ್ರವನ್ನು ಯಾವಾಗ ಕೊಡಲಾಗುತ್ತದೆ? ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ? ಎಂದು ಕೇಳಿದ್ದಕ್ಕೆ, ಅರ್ಜಿ ಫಾರಂಗಳನ್ನು ಗ್ರಾಮ ಸಭೆಗಳಲ್ಲಿ ತೆಗೆದುಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಕೊಟ್ಟಿದ್ದೇವೆಂದು ಹೇಳಿದರು, ಗ್ರಾಮ ಸಭೆ ನಡೆಯುತ್ತಿದೆಯೆಂದು ಹೇಳಿದರು. ನಾನು ಆ ಭಾಗದಿಂದ ಬಂದಿರುವವನು, ಇದರ ಬಗ್ಗೆ ಅಲ್ಲಿ ಗ್ರಾಮ ಸಭೆ ನಡೆದಿರುವಂಥಾದ್ದು ನನಗೆ ಗೊತ್ತಿಲ್ಲ. ಅಲ್ಲಿ ಗ್ರಾಮ ಸಭೆ ನಡೆದಿರುವಂಥಾದ್ದು ನನ್ನ ಗಮನಕ್ಕೆ ಬಂದಿಲ್ಲ. ನಾನು ಕೆಲವು ಗ್ರಾಮ ಪಂಚಾಯತ್‌ಗಳಿಗೂ ಇತ್ತೀಚಿನ ದಿವಸಗಳಲ್ಲಿ ಭೇಟಿ ಮಾಡಿದ್ದೇನೆ, ಜೊತೆಗೆ ನಿರ್ದಿಷ್ಟವಾಗಿ ಯಾರು ಗ್ರಾಮದಲ್ಲಿ ಅರ್ಜಿಯನ್ನು ತೆಗೆದುಕೊಳ್ಳಬೇಕೆಂದು ಕೂಡ ಇದರಲ್ಲಿ ನಮೂದಿಸಿಲ್ಲ. ಇದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಹೇಳಿದ್ದೇವೆಂದು ಹೇಳಿದ್ದಾರೆ. ಈ ಅರ್ಜಿಯನ್ನು ಸಲ್ಲಿಸುವುದಕ್ಕೆ ಕೊನೆಯ ದಿವಸ ಯಾವುದೆಂದು ಇಲ್ಲ. ಅವರನ್ನು ಅರಣ್ಯವಾಸಿಗಳೆಂದು ದೃಢೀಕರಣ ಮಾಡಬೇಕೆಂಬುದನ್ನು ಕೂಡ ಇದರಲ್ಲಿ ನಮೂದು ಮಾಡಿಲ್ಲ. ಒಟ್ಟಾರೆ ಇದು ಹಾರಿಕೆ ಉತ್ತರ ಇದ್ದಹಾಗೆ ಕಾಣುತ್ತದೆ. ಅಲ್ಲಿನ ಜನರಲ್ಲಿ ಒಂದು ರೀತಿಯ ಭಯದ ವಾತಾವರಣ ಇದೆ. ಅದನ್ನು ಹೋಗಲಾಡಿಸಲು ಬೇಕಾದಂಥ ಒಂದು ನಿಶ್ಚಿತವಾದ ಉತ್ತರ ಖಂಡಿತ ಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು ವಿಚಾರ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಏನು ವ್ಯವಸ್ಥೆಯನ್ನು ಮಾಡಿದ್ದೀರಿ? ಎಂದು ಕೇಳಿದ್ದೇನೆ. ಅದಕ್ಕೆ ಸರ್ಕಾರದ ಉತ್ತರದಲ್ಲಿ ಏನು ಹೇಳಿದ್ದಾರೆಂದರೆ, ಅವರಿಗೆ ಬೇಕಾದಂಥ ಕೊಳವೆ ಬಾವಿ, ರಸ್ತೆ ರಿಪೇರಿ, ಸಮುದಾಯ ಭವನ, ದನ-ಕರುಗಳಿಗೆ ನೀರಿನ ಅವಶ್ಯಕತೆಗಳಿಗೆ ಬೇಕಾದಂಥ ವ್ಯವಸ್ಥೆಗಳನ್ನು ಮಾಡಿಸುತ್ತೇವೆಂದು ಹೇಳಿದ್ದಾರೆ. ಅಲ್ಲಿ ಖಂಡಿತವಾಗಿಯೂ ರಸ್ತೆಯನ್ನು ಮಾಡುವುದಕ್ಕೆ ಬಿಡುತ್ತಿಲ್ಲ. ಇದು ಸತ್ಯಕ್ಕೆ ದೂರವಾದದ್ದು, ಅಲ್ಲಿ ಕೊಳವೆ ಬಾವಿಯ ರಿಗ್‌ಗಳು ಹೋಗುವುದಕ್ಕೆ ಅರಣ್ಯ ಇಲಾಖೆಯವರು ಬಿಡುತ್ತಿಲ್ಲ. ಇಲ್ಲಿ ಉತ್ತರ ಕೊಟ್ಟಿರುವಂಥಾದ್ದೇ ಒಂದು, ಅಲ್ಲಿ ವಾಸ್ತವವಾಗಿ ನಡೆಯುತ್ತಿರುವಂಥಾದ್ದೆ ಒಂದು. ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕು. ಇದಕ್ಕೆ ಸ್ಪಷ್ಟವಾದಂಥ ಉತ್ತರವನ್ನು ಸಂಬಂಧಪಟ್ಟವರು ನನಗೆ ಕೊಡಬೇಕೆಂದು ಹೇಳುತ್ತೇನೆ. ಇನ್ನೊಂದು ವಿಚಾರವನ್ನು ನಾನು ಕೇಳಿದ್ದೇನೆ. ಮೂಲಭೂತ ಸೌಕರ್ಯಗಳಾದ ಮನೆ ನಿರ್ಮಾಣ ಮುಂತಾದ ಬೇರೆ ಬೇರೆ ವಿಚಾರಗಳಿಗೆ ನಾವು ಅನುಮತಿಯನ್ನು ಕೊಡುತ್ತಿದ್ದೇವೆ ಎಂಬುದಾಗಿ ಹೇಳುತ್ತಿದ್ದಾರೆ. ಆದರೆ ಇದನ್ನು ಕೊಡುತ್ತಿಲ್ಲ. ಅರಣ್ಯದಲ್ಲಿ ವಾಸ ಮಾಡತಕ್ಕಂಥ ಜನರಿರಬಹುದು ಅಥವಾ

ಅರಣ್ಯ ಪಕ್ಕದಲ್ಲಿರತಕ್ಕಂಥ ಸ್ವಂತ ಜಮೀನಿನಲ್ಲಿ ವಾಸ ಇರುವವರನ್ನೂ ಕೂಡ ನೀವು ಒಕ್ಕಲೆಬ್ಬಿಸಲಾಗುವುದು ಎನ್ನುವ ಭಯವನ್ನು ಅರಣ್ಯ ಇಲಾಖೆ ಸೃಷ್ಟಿ ಮಾಡತಕ್ಕಂಥ ಒಂದು ಪರಿಸ್ಥಿತಿ ಉಂಟಾಗಿ ಒಂದು ರೀತಿಯ ಸಾಮಾಜಿಕವಾದಂಥ ಗೊಂದಲವನ್ನು ಪಶ್ಚಿಮ ಘಟ್ಟದ ತಪ್ಪಲಲ್ಲಿ ಇವತ್ತು ನಾವು ಕಾಣುತ್ತಿದ್ದೇವೆ. ಇದು ಬಹಳ ಗಂಭೀರವಾದಂಥ ವಿಚಾರ. ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಏಕೆಂದರೆ, ಸ್ವಂತ ಜಮೀನು ಇದ್ದವರಿಗೂ ಕೂಡ ಅತಂತ್ರ ಪರಿಸ್ಥಿತಿಯಾಗಿದೆ. ಅಲ್ಲಿ ರಸ್ತೆ ಮಾಡಲಿಕ್ಕೆ ಬಿಡುತ್ತಿಲ್ಲ. ಲೈಟ್ ಕಂಬ ಹಾಕಲೂ ಬಿಡುತ್ತಿಲ್ಲ. ಆದರೆ, ಉತ್ತರ ಕೊಡುವಾಗ, ಇಲ್ಲಿ ರಸ್ತೆ ಮಾಡಲಿಕ್ಕೆ ಬಿಡುತ್ತೇವೆ ಎಂದು ಹೇಳುತ್ತಾರೆ. ನನ್ನ ಪ್ರದೇಶದಲ್ಲಿ ಬಿಡುತ್ತಿಲ್ಲ. ಇದು ಬಹಳ ಗಂಭೀರವಾದಂಥ ಸಮಸ್ಯೆ. ಲೈಟ್ ಕಂಬ ಹೋಗಲಿಕ್ಕೆ ಬಿಡುತ್ತಿಲ್ಲ. ದಯವಿಟ್ಟು ಇದಕ್ಕೆ ಉತ್ತರವನ್ನು ಕೊಡಬೇಕು ಎನ್ನುವುದು ನನ್ನ ವಿನಂತಿ.

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಸದಸ್ಯರ ಕಳಕಳಿ ಏನಿದೆ ಎಂದರೆ, ಅನೇಕ ವರ್ಷಗಳಿಂದ ಅಲ್ಲಿ ವಾಸ ಮಾಡುತ್ತಿರುವಂಥ ಜನರಿಗೆ ಹಕ್ಕುಪತ್ರಗಳನ್ನು ಕೊಡಬೇಕಾದಂಥ ಕೆಲಸ ಆಗಬೇಕಾಗಿದೆ ಎನ್ನುವುದಾಗಿದೆ. ಅರಣ್ಯ ಪ್ರದೇಶದಲ್ಲಿ ವಾಸ ಮಾಡುವ ಜನರಿಗೆ ಹಕ್ಕುಪತ್ರವನ್ನು ಕೊಡುವ ಸಲುವಾಗಿ ಕೇಂದ್ರ ಸರ್ಕಾರ ಒಂದು ಕಾನೂನನ್ನು ಮಾಡಿ, ಜಾರಿಗೊಳಿಸಿದ್ದು ಯಾವಾಗ ಎನ್ನುವುದನ್ನು ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ. 1-4-2008ರಿಂದ ಮಾತ್ರ ಇದು ಜಾರಿಗೆ ಬರುತ್ತಿದೆ. ಈ ಕಾನೂನಿನನ್ವಯ ಅವರಿಗೆ ಹಕ್ಕುಗಳನ್ನು ಕೊಡಬೇಕಾದಂಥ ಕೆಲಸ ಆಗಬೇಕಾಗಿದೆ. ಅದರಲ್ಲಿಯೂ ಸಹ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡದವರಿಗೆ ಮಾತ್ರ ಎನ್ನುವುದನ್ನೂ ಸಹ ತಾವು ಗಮನಿಸಬೇಕು ಎನ್ನುವುದನ್ನು ಇಲ್ಲಿ ನಾನು ಹೇಳಲಿಕ್ಕೆ ಬಯಸುತ್ತಿದ್ದೇನೆ. ಇದನ್ನು ಮಾಡುವುದರ ಸಲುವಾಗಿ ಈಗಾಗಲೇ ಸಮಿತಿಗಳನ್ನು ರಚಿಸಿ, ಕಾರ್ಯಕ್ರಮವನ್ನು ಜರುಗಿಸಬೇಕು ಎನ್ನುವ ಸೂಚನೆ ಹೋದ ಪ್ರಕಾರವಾಗಿ ಕೊಡಗು ಜಿಲ್ಲೆಯಲ್ಲಿ ಈಗಾಗಲೇ 98 ಗ್ರಾಮಸಭೆಗಳನ್ನು, 51 ಅರಣ್ಯ ಹಕ್ಕುಗಳ ಸಮಿತಿಗಳನ್ನು ರಚಿಸಲಾಗಿದೆ. ಇದಕ್ಕೆ ಒಂದು format ಇದೆ. ಜಿಲ್ಲಾ ಪರಿಷತ್ತಿನ ಚೀಫ್ ಸೆಕ್ರೆಟರಿಗಳಿಗೆ ಮತ್ತು ಅಲ್ಲಿಯ ಜಿಲ್ಲಾಧಿಕಾರಿಗಳಿಗೆ, ಫಾರೆಸ್ಟ್ ಇಲಾಖೆಯ ಅಧಿಕಾರಿಗಳಿಗೆ, ಹೀಗೆ ಎಲ್ಲರಿಗೂ ಸೂಚನೆ ಹೋಗಿದೆ. ಆ ಸೂಚನೆಯ ಪ್ರಕಾರ ಇನ್ನು ಕೆಲವೇ ದಿನಗಳಲ್ಲಿ ಅವರಿಗೆ ಈ ಸೌಲಭ್ಯ ದೊರೆಯುತ್ತದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಅರಣ್ಯದಲ್ಲಿ ರಸ್ತೆಗಳನ್ನು ಮಾಡಲು ಬಿಡುತ್ತಿಲ್ಲ ಎಂದು ತಾವು ಹೇಳುತ್ತಿದ್ದೀರಿ. ಇದು ನಿಶ್ಚಿತವಾದದ್ದೇ. ಅರಣ್ಯದಲ್ಲಿ ರಸ್ತೆಗಳನ್ನು ಮಾಡುವುದು ಸಾಧುವಾದುದಲ್ಲ ಎನ್ನುವುದನ್ನು ಎಲ್ಲ ಸಂದರ್ಭಗಳಲ್ಲಿ, ಅರಣ್ಯ ಪರಿಸರದ ಬಗ್ಗೆ ಮಾತನಾಡುವಾಗ ನಾವು ಹೇಳುತ್ತೇವೆ. ಇದರಿಂದ ಅರಣ್ಯ ಹಾಳಾಗುತ್ತದೆ ಎಂದು ಹೇಳುವವರೂ ನಾವೇ. ಅರಣ್ಯದಲ್ಲಿ ರಸ್ತೆಗಳನ್ನು ಮಾಡಿಕೊಟ್ಟರೆ ಮುಂದೆ ಏನಾಗಬಹುದು ಎನ್ನುವುದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಹೀಗಾಗಿ ಅರಣ್ಯದಲ್ಲಿ ರಸ್ತೆಗಳನ್ನು ಮಾಡಲಿಕ್ಕಿಲ್ಲ. ಆದರೆ ಅರಣ್ಯಕ್ಕೆ ಹೊಂದಿಕೊಂಡಂತಿರುವ ಸ್ಥಳದಲ್ಲಿ ತಮ್ಮ ಸ್ವಂತ ಜಮೀನಿನಲ್ಲಿ ವಾಸ ಮಾಡುತ್ತಿರುವಂಥ ಜನರಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಡುವಂಥ ಕೆಲಸವನ್ನು ಮಾಡಬೇಕಾಗಿದೆ. ಇದನ್ನು ಇಲಾಖೆಯು ಪರಿಶಿಷ್ಟ ವರ್ಗಗಳ ಕಲ್ಯಾಣ

ಇಲಾಖೆಯಿಂದ ಅನುಷ್ಠಾನಗೊಳಿಸುವ ಸಲುವಾಗಿ ಈ ಯೋಜನೆಯನ್ನು ಕಾರ್ಯಗತಗೊಳಿಸುವಂಥ ಯೋಜನೆಯನ್ನು ಮಾಡಿದೆ. ಈ ಸೌಲಭ್ಯ 1-4-2008ರಿಂದ ಕಾನೂನು ಆದಮೇಲೆ ಲಭ್ಯತೆಯಾಗುತ್ತಿದೆ. ಇಷ್ಟು ದಿವಸಗಳವರೆಗೆ ಆಗಿರುವ ಶೋಷಣೆಯನ್ನು ನೋಡಿ ತಮ್ಮ ಮನಸ್ಸಿನಲ್ಲಿ ಒಂದು ಆತಂಕ ಇರಬಹುದು. ಈಗ ಬಂದಿರುವಂಥ ಈ ಕಾನೂನನ್ನು ಜಾರಿಗೊಳಿಸಬೇಕಾದಲ್ಲಿ ಇದಕ್ಕೆ ಜನರು ಸಕ್ರಿಯವಾಗಿ ಭಾಗಿಯಾಗಿದ್ದೇ ಆದರೆ, ನಿಮ್ಮೆಲ್ಲರ ಸಮಸ್ಯೆಗಳಿಗೆ ಪರಿಹಾರ ದೊರೆಯುತ್ತದೆ ಎನ್ನುವುದನ್ನು ಇಲಾಖಾಧಿಕಾರಿಗಳು ಸೂಚನೆಯನ್ನು ಕೊಟ್ಟಿದ್ದಾರೆ ಮತ್ತು ಅದನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಮಾನಿಟರ್ ಮಾಡಬೇಕಾದಂಥ ವ್ಯವಸ್ಥೆಯನ್ನು ಸಹ ಇಲಾಖೆಯ ಅಧಿಕಾರಿಗಳು ಕೈಗೊಳ್ಳುತ್ತಾರೆ ಎನ್ನುವುದನ್ನು ಇಲ್ಲಿ ಹೇಳಲಿಕ್ಕೆ ಬಯಸುತ್ತಿದ್ದೇನೆ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವ ಉತ್ತರದಲ್ಲಿ ಯಾವುದೇ ಸ್ಪಷ್ಟತೆ ಇಲ್ಲ. ಪ್ರಶ್ನೆಗೂ, ಉತ್ತರಕ್ಕೂ ಯಾವುದೇ ರೀತಿಯಲ್ಲಿ ತಾಳೆ ಆಗುವಂಥ ಉತ್ತರ ಬಂದಿಲ್ಲ. ಅರಣ್ಯದಲ್ಲಿ ಅನೇಕ ವರ್ಷಗಳಿಂದ ವಾಸ್ತವ್ಯವಿದ್ದ ಮತ್ತು ಕೃಷಿ ಮಾಡಿದ ಜಮೀನನ್ನು ಫಲಾನುಭವಿಗಳಿಗೆ ವಿತರಿಸಲು ರಾಜ್ಯದ ಯಾವಯಾವ ತಾಲ್ಲೂಕುಗಳಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಬಾಕಿ ಇದೆ ಎಂದು ಪ್ರಶ್ನೆಯನ್ನು ಕೇಳಿದ್ದಾರೆ. Forest Conservation Act, 1980 ಕಾಯಿದೆ ಬಂದು ಈಗಾಗಲೇ ಸುಮಾರು 25 ವರ್ಷಗಳನ್ನು ದಾಟಿದೆ. 1980ಕ್ಕಿಂತ ಹಿಂದೆ ಅರಣ್ಯ ಪ್ರದೇಶದಲ್ಲಿ ಎಲ್ಲೆಲ್ಲಿ ಜನ ವಾಸ ಮಾಡುತ್ತಿದ್ದರು, ಗ್ರಾಮಠಾಣಗಳಿದ್ದವು, ವ್ಯವಸಾಯಕ್ಕೆ ಯೋಗ್ಯವಾಗಿದ್ದು ಅಲ್ಲಿ ವ್ಯವಸಾಯ ಮಾಡುತ್ತಿದ್ದಂಥ ಅರಣ್ಯ ಭೂಮಿಯೇನಿತ್ತು ಅವುಗಳಿಗೆ ಸಂಬಂಧಿಸಿದ ವರದಿಗಳೆಲ್ಲಾ ಈಗಾಗಲೇ ಅರಣ್ಯ ಇಲಾಖೆಯಲ್ಲಿವೆ. ಆದರೆ ಅರಣ್ಯ ಇಲಾಖೆಯಲ್ಲಿ, ಯಾವುದೇ ರೀತಿಯಲ್ಲಿ ಜನರಿಗೆ ಅನುಕೂಲ ಆಗುವಂಥ ಅಥವಾ ಜನರು ವಾಸ ಮಾಡುವಂಥ ಪ್ರದೇಶಗಳನ್ನು ಬಿಡುಗಡೆ ಮಾಡುವಂಥ ಮನೋಭಾವ ಇಲಾಖೆಯಲ್ಲಿ ಇಲ್ಲದೇ ಇರುವುದರಿಂದ ಈ ರೀತಿಯ ಉತ್ತರವನ್ನು ಮುಖ್ಯಮಂತ್ರಿಗಳ ಮುಖಾಂತರ ಕೊಡಿಸಿದ್ದಾರೆ. ಇದರಲ್ಲಿ ಬಹಳ ವರ್ಷಗಳಿಂದ ನಿರಂತರವಾಗಿ ಕಂದಾಯ ಇಲಾಖೆಗೂ ಮತ್ತು ಅರಣ್ಯ ಇಲಾಖೆಗೂ ಜಿಜ್ಞಾಸೆ ನಡೆಯುತ್ತಿದೆ. ಉತ್ತರದಲ್ಲಿ ಯಾವುದೇ ಸ್ಪಷ್ಟತೆ ಇಲ್ಲದೇ ಇರುವುದರಿಂದ, ಈಗ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರ ಕೊಡುತ್ತಿರುವ ಲೋಕೋಪಯೋಗಿ ಸಚಿವರು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇದು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗೆ ಸಂಬಂಧವಿಲ್ಲ. ಇದರಲ್ಲಿ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಗೆ ಇರತಕ್ಕಂಥ ಒಂದು ಜಂಜಾಟವನ್ನು ನಿವಾರಣೆ ಮಾಡಬೇಕು. ಇದಕ್ಕೆ ತಾವು ಆಸಕ್ತಿ ವಹಿಸಿ ಆದಷ್ಟು ಬೇಗ ಮಾಡಬೇಕು. ಉದಾಹರಣೆಗೆ, ಹೊಗೇನಕಲ್ ಫಾಲ್ಸ್ ಬಗ್ಗೆ ನಿನ್ನೆ ಚರ್ಚೆಯಾಗಿದೆ. ಅಲ್ಲಿ ಒಂದು ಗ್ರಾಮ ಇದೆ. ಆ ಗ್ರಾಮದಲ್ಲಿ ಒಂದು ಶಾಲೆಯನ್ನು ತೆರೆಯಲು ಅರಣ್ಯ ಇಲಾಖೆಯವರು ಇಷ್ಟು ವರ್ಷವಾದರೂ ಅವಕಾಶ ಕೊಡುತ್ತಿಲ್ಲ. ಅದಕ್ಕೆ 20 ಅಡಿ 30 ಅಡಿ ಜಾಗ ಕೊಡುವುದಕ್ಕೆ, ಒಂದು ಶಾಲಾ ಕಟ್ಟಡವನ್ನು ಕಟ್ಟುವುದಕ್ಕೆ ಇವತ್ತಿನವರೆಗೆ ಅವಕಾಶವನ್ನು

ಕೊಡುತ್ತಿಲ್ಲ. ಕೊಳ್ಳೇಗಾಲ ಪಟ್ಟಣದ ಪರಿಮಿತಿವರೆಗೆ ಅರಣ್ಯ ಇಲಾಖೆಯ ಹದ್ದು ಬಸ್ತು ಇದೆ ಎಂದು ಹೇಳಿ ಅರಣ್ಯ ಇಲಾಖೆಯವರು ಅಲ್ಲಿ ಕಟ್ಟಡಗಳನ್ನು ಕಟ್ಟಿರುವವರಿಗೆ ಯಾವುದೇ ರೀತಿಯ ಬೇರೆ ಸೌಕರ್ಯಗಳನ್ನು ಹೊಂದುವುದಕ್ಕೆ ಅವಕಾಶ ಕೊಡುತ್ತಿಲ್ಲ. ಇಂಥ ಅನೇಕ ಪ್ರಕರಣಗಳಿದ್ದು, ಇವುಗಳಿಗೆ ಒಂದು ಕೊನೆ ಹಾಡಬೇಕಾಗಿದೆ. ಹೊನ್ನಾಚಿಗೆ ಹೋಗುವಂಥ ಒಂದು ರಸ್ತೆ ಏನಿದೆ, ಅದು ಅರಣ್ಯ ಇಲಾಖೆಗೆ ಸೇರಿದೆ ಎಂದು ಹೇಳಿ, ಅಲ್ಲಿ ವಾಹನಗಳ ಸಂಚಾರಕ್ಕೆ ಅರಣ್ಯ ಇಲಾಖೆಯವರು ನಿರ್ಬಂಧ ಹೇರುತ್ತಿದ್ದಾರೆ. ಇಂಥದ್ದಕ್ಕೆಲ್ಲಾ ಒಂದು ಪರಿಹಾರ ಆದಷ್ಟು ಬೇಗ ಈ ಸರ್ಕಾರದಲ್ಲಿ ಆದರೆ ಒಳ್ಳೆಯದು ಎನ್ನುವುದು ನಮ್ಮ ಒತ್ತಾಯ.

ಶ್ರೀ ಹೆಚ್. ಗೋಪಾಲ ಭಂಡಾರಿ : ಮಾನ್ಯ ಮಂತ್ರಿಗಳು ಉತ್ತರ ಕೊಟ್ಟರು. ಅರಣ್ಯ ಸಂರಕ್ಷಣಾ ಆದಿವಾಸಿ ಕಾಯಿದೆ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಶಿಷ್ಟ ಪಂಗಡದವರಿಗೆ ಮಾತ್ರ ಜಮೀನನ್ನು ಮಂಜೂರು ಮಾಡಲಿಕ್ಕೆ ಅವಕಾಶವಿದೆ ಎನ್ನುವಂಥಾದ್ದನ್ನು ಹೇಳಿದರು. ನಾನು ಕಂಡುಕೊಂಡ ಪ್ರಕಾರ, ಅವರಿಗಲ್ಲದೆ ಸುಮಾರು 75 ವರ್ಷಗಳಿಂದ ಆ ಭಾಗದಲ್ಲಿ ವಾಸ್ತವ್ಯ ಇರತಕ್ಕಂಥ ಇತರೆ ಜನಾಂಗದವರಿಗೂ ಕೂಡ ಕೊಡಲಿಕ್ಕೆ ಅವಕಾಶವಿದೆ ಎನ್ನುವುದು ನನ್ನ ಅನಿಸಿಕೆ. ನಾನು ಕಂಡುಕೊಂಡಂಥ ಪ್ರಕಾರ ಅದಕ್ಕೆ ಅವಕಾಶವಿದೆ. ಆದ್ದರಿಂದ, ಅದನ್ನೂ ಕೂಡ ಸ್ಪಷ್ಟವಾಗಿ ಸಂಬಂಧಪಟ್ಟಂಥ ಅಧಿಕಾರಿಗಳ ಗಮನಕ್ಕೆ ತರಬೇಕು. ಏಕೆಂದರೆ, ಅರಣ್ಯ ಇಲಾಖೆಯಲ್ಲಿ positive approach ಇಲ್ಲ. ರಸ್ತೆ ಮಾಡಲಿಕ್ಕೆ ಆಗುವುದಿಲ್ಲ, ಯಾರು ಸ್ವಂತ ಜಮೀನಿನಲ್ಲಿದ್ದಾರೆ ಅವರಿಗೆ ಹೋಗಲಿಕ್ಕೆ, ಬರಲಿಕ್ಕೆ ತೊಂದರೆ ಇಲ್ಲ ಎಂದು ಅವರು ಹೇಳಿದ್ದಾರೆ. ನಾನು ಕೇಳುತ್ತಿರುವುದೂ ಅದನ್ನೇ. ಸ್ವಂತ ಜಮೀನಿಗೆ ಹೋಗತಕ್ಕಂಥ ಅಥವಾ ಒಂದು ಊರಿಗೆ ಹೋಗತಕ್ಕಂಥ ಜಾಗ ಅರಣ್ಯದ ಮಧ್ಯದಲ್ಲಿದೆ. ಅಲ್ಲಿ ಈಗಾಗಲೇ ರಸ್ತೆ ಇದೆ. ಇರುವಂಥ ರಸ್ತೆಯನ್ನೂ ಕೂಡ ಅಭಿವೃದ್ಧಿ ಮಾಡಲಿಕ್ಕೆ ಅರಣ್ಯ ಇಲಾಖೆಯವರು ಬಿಡುತ್ತಿಲ್ಲ. ಆದ್ದರಿಂದ, ಇದರ ಬಗ್ಗೆ ಉತ್ತರ ಕೊಡಬೇಕು.

ಶ್ರೀ ಸಿ. ಟಿ. ರವಿ : 1980ಕ್ಕಿಂತ ಮುಂಚೆ ವಾಸ ಇದ್ದಂಥ ಬಡ ಕುಟುಂಬಗಳಿಗೂ ಕೂಡ ರಕ್ಷಣೆ ಕೊಡಬೇಕು ಎಂದು ಹೇಳಿ ಈ ಕಾಯಿದೆಯಲ್ಲಿ ಅವರಿಗೆ ಅವಕಾಶ ಕೊಟ್ಟಿದ್ದಾರೆ. ಆದರೆ, ಅವರಿಗೆ ಯಾವುದೇ ಸೌಲಭ್ಯವನ್ನು ಕಲ್ಪಿಸಿ ಕೊಡದೇ ಇರುವುದರಿಂದ, ಅವರನ್ನು ಪುನರ್‌ವಸತಿ ಮಾಡುವಂಥ ಯೋಚನೆ ಯೇನಾದರೂ ಸರ್ಕಾರಕ್ಕಿದೆಯೇ? ಅವರಿಗೆ ನಾಗರಿಕ ಸೌಲಭ್ಯಗಳನ್ನು ಕಲ್ಪಿಸಿ ಕೊಡದೇ ಹೋದರೆ, ಅವರನ್ನು ನರಕದಲ್ಲಿಟ್ಟ ಹಾಗೆ ಆಗುತ್ತದೆ. ಆ ರೀತಿ, ನಾಗರಿಕ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ಸಾಧ್ಯವಿಲ್ಲ ಎನ್ನುವುದಾದರೆ, ಅರಣ್ಯ ಇದೆ ಎಂದು ಹೇಳಿ ಅಲ್ಲಿ ರಸ್ತೆ ಮಾಡುವುದಕ್ಕಾಗುವುದಿಲ್ಲ, electric line ಹಾಕುವುದಕ್ಕೆ ಆಗುವುದಿಲ್ಲ, overhead tank ಮಾಡುವುದಕ್ಕೆ ಅವಕಾಶ ಕೊಡುವದಿಲ್ಲ, pipeline ಹಾಕುವುದಕ್ಕೆ ಅವಕಾಶ ಕೊಡುವುದಿಲ್ಲ ಎನ್ನುವುದಿದ್ದಾಗ ಅವರಿಗೆ ಪುನರ್‌ವಸತಿ ಕಲ್ಪಿಸತಕ್ಕಂಥ ಯೋಚನೆ ಏನಾದರೂ ಸರ್ಕಾರದ ಮುಂದಿದೆಯೇ?

ಶ್ರೀ ಡಿ. ಎನ್. ಜೀವರಾಜ್ : ರವಿಯವರು ಮತ್ತು ಭಂಡಾರಿಯವರು ಏನು ಹೇಳಿದ್ದಾರೆ, ಇದನ್ನು ಬಹಳ ಹತ್ತಿರದಿಂದ ಅನುಭವಿಸುತ್ತಿರುವವರು ನಾವು. ಹಾಗಾಗಿ, ಈಗ ನಮ್ಮದೇ ಸರ್ಕಾರವಿದೆ. ಸರ್ಕಾರ ಅದಕ್ಕೇನಾದರೂ ಸಹಾನುಭೂತಿಯಿಂದ ಒಂದು ಕಾರ್ಯಕ್ರಮವನ್ನು ಮಾಡಿಕೊಡಬೇಕೆಂದು ತಾವು ಹೇಳಬೇಕು.

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ಸರ್ಕಾರ ನಮ್ಮದೂ ಕೂಡ ಆಗಿದೆ. ಅವರೊಬ್ಬರದೇ ಸರ್ಕಾರವಲ್ಲ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ : ಸದನವನ್ನು ಬಿ.ಜೆ.ಪಿ. ಸರ್ಕಾರ ಮಾಡುವುದಕ್ಕೆ ಹೊರಟುಬಿಟ್ಟಿದ್ದಾರೆಯೇ?

ಶ್ರೀ ಡಿ. ಎನ್. ಜೀವರಾಜ್ : ನೀವು ಹೀಗೇ ಹೇಳುತ್ತೀರಿ ಎಂದು ಗೊತ್ತಿತ್ತು. ಅದಕ್ಕಾಗಿಯೇ, ನಮ್ಮದೇ ಸರ್ಕಾರ ಎಂದು ಹೇಳಿದ್ದು.

ಶ್ರೀ ಸಿ. ಟಿ. ರವಿ : ನಮ್ಮದೇ ಸರ್ಕಾರ ಎಂದರೆ ಸಂಕುಚಿತ ಭಾವದಲ್ಲಿ ತೆಗೆದುಕೊಳ್ಳುವುದು ಬೇಡ. ಕರ್ನಾಟಕ ಸರ್ಕಾರ ಎನ್ನುವ ಭಾವನೆಯಲ್ಲಿ ಅವರು ಹೇಳಿದ್ದಾರೆ.

ಶ್ರೀ ಸಿ. ಎಂ. ಉದಾಸಿ : ಮಾನ್ಯ ಸದಸ್ಯರು ಹೇಳಿದ ಹಾಗೆ, ನಾನು ಎಲ್ಲ ವಿಷಯಗಳ ಗಂಭೀರತೆಯನ್ನು ಗಣನೆಗೆ ತೆಗೆದುಕೊಂಡು ಇಲಾಖಾಧಿಕಾರಿಗಳಿಗೆ ಕೆಲವು ವಿಚಾರಗಳನ್ನು ಮರುಪರಿಶೀಲನೆ ಮಾಡಲಿಕ್ಕೆ ಸಾಧ್ಯವೆ, ಹೇಗೆ ಎನ್ನುವುದನ್ನು ನೋಡಲಿಕ್ಕೆ ಹೇಳುತ್ತೇನೆ. ಆದರೆ ಒಂದು ಅಂಶವನ್ನು ಅವರ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಮಿಟಿಯನ್ನು ರಚಿಸಬೇಕು. Deputy conservator of Forests ಅದರಲ್ಲಿ Member ಆಗಿರಬೇಕು, ಜಿಲ್ಲಾ ಪಂಚಾಯಿತಿಯ ಮೂವರು ಸದಸ್ಯರು ಅದರಲ್ಲಿ Members ಆಗಿರಬೇಕು. ಈ ರೀತಿಯಾಗಿ ಒಂದು ಕಮಿಟಿಯನ್ನು ಮಾಡಿದ್ದಾರೆ. ಆ ಕಮಿಟಿಯವರು ಸಭೆ ಕರೆದು ತೀರ್ಮಾನವನ್ನು ಕೈಗೊಳ್ಳಬಹುದಾಗಿದೆ. ಮೂರು ಹಂತದ ಕಮಿಟಿಗಳಿವೆ, Assistant Commissioner Levelನಲ್ಲಿ ಒಂದು ಕಮಿಟಿ, ತಾಲ್ಲೂಕು ಮಟ್ಟದಲ್ಲಿ ಒಂದು ಕಮಿಟಿ, ಗ್ರಾಮ ಮಟ್ಟದಲ್ಲಿ ಒಂದು ಕಮಿಟಿ ಇದೆ. ಆ ಕಮಿಟಿಗಳಲ್ಲಿ ಫಲಾನುಭವಿಗಳು ಆಯ್ಕೆಯಾಗಬೇಕು. ತಮ್ಮ ಗಮನಕ್ಕಾಗಿ ಒಂದು ವಿಚಾರವನ್ನು ಹೇಳಿದೆ. "ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳು" ಎನ್ನುವುದು ಇದರಲ್ಲಿ ಇದೆ. "ಇತರ ಪಾರಂಪರಿಕ ಅರಣ್ಯವಾಸಿಗಳು" ಹೆಸರಿನಲ್ಲಿರಬೇಕಾದಂಥ ಈ ಅಧಿನಿಯಮ ಏನು ಬಂದಿದೆ, ಇದರ ಪ್ರಕಾರ ಈ ಎಲ್ಲ ಜನರಿಗೂ ಸೌಲಭ್ಯ ದೊರೆಯುತ್ತದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಲು ಇಚ್ಛೆ ಪಡುತ್ತಿದ್ದೇನೆ. ಅಲ್ಲಿಯ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ, ಕೆಲವರಿಗೆ ಅದರ ಮಂಜೂರಾತಿ ಕೊಡುವ ವಿಚಾರದಲ್ಲಿ ಸಾಧ್ಯವೆ ಎನ್ನುವುದನ್ನು ಪರಿಶೀಲನೆ ಮಾಡಬೇಕೆಂದು ಶ್ರೀ ಸಿ. ಟಿ. ರವಿಯವರು ಹೇಳಿದ್ದಾರೆ. ಅದನ್ನು ಪರಿಶೀಲನೆ ನಾವು ಮಾಡುತ್ತೇವೆ.